

ಧಾರವಾಡ ತಾಲ್ಲೂಕಿನ ಕರಡಿಗುಡ್ಡ ಗ್ರಾಮದ ಈ ಮಹಿಳೆಯರು ಹೊಲದ ಕೆಲಸ ಮುಗಿಸಿಕೊಂಡು ಮನೆಗಳತ್ತ ಹೊರಟಿದ್ದಾರೆ.

ಮನೆ ಮಕ್ಕಳಂತಿರುವ ಎತ್ತುಗಳನ್ನು ಮಾರಾಟಕ್ಕೆ ತರುತ್ತಾರೆ. ದನದ ಸಂತೆಯ ಸನ್ನಿವೇಶಗಳಂತೂ ಕರುಳನ್ನು ಹಿಂಡುವಂತೆ ಮಾಡುತ್ತವೆ. ಪ್ರೀತಿಯಿಂದ ಜೋಪಾನ ಮಾಡಿದ ಎತ್ತುಗಳನ್ನು ಬೆಲೆ ಕಟ್ಟಿ, ಚೌಕಾಸಿ ಮಾಡಿ, ಮಾರಾಟ ಮಾಡುವುದು ರೈತರ ಪಾಲಿಗೆ ತುಂಬಾ ನೋವಿನ ಸಂಗತಿ.

‘ಎಲಿ–ಅಡ್ಕಿ ಹಾಕ್ತಿರೇನ್ರಿ ಸಾಹೇಬ್ರ’ ಎನ್ನುತ್ತಾ ಕಿಸೆಯಿಂದ ಸೆಂಚಿಯನ್ನು ತೆಗೆದು, ಮುಖದ ಮೇಲಿನ ಮಾಸ್ಕ್ ಅನ್ನು ಕೆಳಗೆ ಸರಿಸಿದರು ಧಾರವಾಡ ದನದ ಸಂತೆಯಲ್ಲಿ ಮಾತಿಗೆ ಸಿಕ್ಕ ನಿಂಗಪ್ಪಜ್ಜ. ಮಗಳ ಮದುವೆಗಾಗಿ ಹೊಲವನ್ನು ಮಾರಿದ್ದಲ್ಲದೆ ಮನೆ ರಿಪೇರಿಗಾಗಿ ಸಾಲವನ್ನೂ ಮಾಡಿದವರು ಅವರು. ಸಾಲ ತೀರಿಸಿ ಕೈತೊಳೆದುಕೊಳ್ಳುವ ಸಲುವಾಗಿ ಎತ್ತುಗಳನ್ನು ಮಾರಲು ಬಂದಿದ್ದರು. ಲೋಕಾಭಿರಾಮವಾಗಿ ಅವರು ಏನೇ ಹರಟಿದರೂ ಎತ್ತು ಮಾರುವಂತಹ ಸ್ಥಿತಿ ಬಂದ ಸಂಕಟವನ್ನು ಅವರಿಂದ ಮುಚ್ಚಿಡುವುದು ಸಾಧ್ಯವಾಗಲಿಲ್ಲ.

ಸಾಂಪ್ರದಾಯಿಕ ರೈತ ತನ್ನ ಕೊನೆಯ ಆಸರೆಯಾಗಿ ಉಳಿದಿರುವ ತನ್ನದೇ ಭೂಮಿಯಲ್ಲಿ ಭೂರಹಿತ ಕೃಷಿ ಕಾರ್ಮಿಕನಾಗಿ ಅಥವಾ ಸಂಸ್ಕರಣಾ ಕಾರ್ಖಾನೆಗಳ ಕಾರ್ಮಿಕನಾಗಿ ದುಡಿದು, ಅಲ್ಲಿ ಸಿಕ್ಕಿದ ಸಂಬಳದಲ್ಲಿ ತನ್ನದೇ ಭೂಮಿಯಲ್ಲಿ ಬೆಳೆದ ಬೆಳೆಯನ್ನು ಮಾರುವವರು ಹೇಳಿದ ಬೆಲೆಗೆ ಖರೀದಿಸಿ ಉಣ್ಣಬೇಕಾದ ಸ್ಥಿತಿಗೆ ತಲುಪಲಿದ್ದಾನೆ ಎನ್ನುವ ಕೃಷಿತಜ್ಞರ ಮಾತು ಕಾಡದೇ ಇರಲಿಲ್ಲ.

ಹೌದು, ನಿಜಕ್ಕೂ ಭೂಸುಧಾರಣೆ ಕಾಯ್ದೆಯಲ್ಲಿ ಆಗುವ ತಿದ್ದುಪಡಿಯಿಂದ ಪ್ರಯೋಜನವಾದರೂ ಏನು? ಯಾರೆಲ್ಲ ಕೃಷಿಭೂಮಿಯನ್ನು ಖರೀದಿಸಬಹುದು? ಒಂದು ಹವ್ಯಾಸವಾಗಿ ಕೃಷಿ ನಡೆಸಬಯಸುವ ಜನರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ, ನಿಜ. ಅದರಲ್ಲೂ ಐ.ಟಿ ವಲಯದ ಮಂದಿಗೆ ಈಗೀಗ ಕೃಷಿಯತ್ತ ಒಲವು ಜಾಸ್ತಿಯಾಗುತ್ತಿದೆ. ಆದರೆ, ಅಂಥವರು ಕೃಷಿಯ ವಾರ್ಷಿಕ ಚಕ್ರಕ್ಕೆ ಸತತ ಒಡ್ಡಿಕೊಂಡು ನೆಟ್ಟು, ಬೆಳೆಸಿ, ಕೊಯ್ದು, ಮಾರುವ ಪ್ರಕ್ರಿಯೆಯಲ್ಲಿ ಭಾಗವಹಿಸಲಾರರು. ಹಣ್ಣು–ಹಂಪಲು ಬೆಳೆಯಲು ಹಾತೊರೆಯುವಂತಹ ಜನ ಹೆಚ್ಚಿದ್ದಾರೆಯೇ ಹೊರತು ಕೃಷಿಯಿಂದ ನಮ್ಮ ಜೀವನ ನಡೆಸಬೇಕಾಗಿದೆ ಎಂದು ಹೇಳುವವರು ಬಲು ಅಪರೂಪ.

ಹೊಸ ಕೃಷಿಕರು ತಮ್ಮ ಸೃಜನಶೀಲತೆಗೆ ಒಂದು ದಾರಿಯನ್ನು ಕಂಡುಕೊಂಡಷ್ಟು ನಿಶ್ಚಿತವಾಗಿ ಹಸಿದ ಹೊಟ್ಟೆಯನ್ನು ತುಂಬಿಸಬಲ್ಲರೆಂದು ಅನಿಸುತ್ತಿಲ್ಲ. ಅವರು ಒಂದುವೇಳೆ ಕೃಷಿಯನ್ನು ಪೂರ್ಣಾವಧಿ ತೊಡಗುವಿಕೆಯಾಗಿ ಪರಿಗಣಿಸುವುದಿದ್ದರೆ ಯಾರ ತಕರಾರೂ ಇರಲಿಕ್ಕಿಲ್ಲ ಎನ್ನುವುದು ಐ.ಟಿ ವಲಯದಿಂದ ಹೊರಬಂದು ಪೂರ್ಣಾವಧಿ ಕೃಷಿಕರಾಗಿರುವ ಕೆಲವು ಎಂಜಿನಿಯರ್‌ಗಳು ಹೇಳುವ ಮಾತು.

ಮಂಡ್ಯ ತಾಲ್ಲೂಕು ಹನಿಯಂಬಾಡಿಯ ನೈಸರ್ಗಿಕ ಕೃಷಿಕ ಡಿ.ಚಂದ್ರಶೇಖರ್ ಅವರು ಭೂಸುಧಾರಣೆ ಕಾಯ್ದೆಗೆ ಆಗುತ್ತಿರುವ ತಿದ್ದುಪಡಿಯನ್ನು ಭೂಮಿಯ ಮೌಲ್ಯ ಹೆಚ್ಚಿಸುವ ಪ್ರಕ್ರಿಯೆಯನ್ನಾಗಿ ಕಂಡಿದ್ದಾರೆ. ಭೂಮಿಯ ಮೌಲ್ಯ ಹೆಚ್ಚಿಸುವ ತಿದ್ದುಪಡಿ ಬಂದರೆ ಯಾವ ರೈತ ತಾನೆ ಬೇಡ ಅನ್ನುತ್ತಾನೆ ಎಂದೂ ಅವರು ಪ್ರಶ್ನಿಸುತ್ತಾರೆ. ಮಕ್ಕಳ ಮದುವೆಗೋ, ವಿದ್ಯಾಭ್ಯಾಸಕ್ಕೋ ಅಥವಾ ಸಾಲಕ್ಕೋ ರೈತ ಇರುವ ಭೂಮಿಯನ್ನೆಲ್ಲಾ ಬಂಡವಾಳಶಾಹಿಗಳಿಗೆ ಮಾರುವುದಿಲ್ಲ.